ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಮುದೋಳ

**ಓಎಸ್. ನಂ. 319/2023**

ದಿನಾಂಕಃ **1** ನೇ ಜೂನ್ **2024**

| ವಾದಿಯರು | **: ವಿರುದ್ಧ:** | ಪ್ರತಿವಾದಿಯರು |
|---|---|---|
| ಶ್ರೀಮತಿ ಮಲ್ಲವ್ವಾ ಗಂಡ ನಿಂಗರಾಜ ಸಿದ್ದಾಪೂರ ಹಾಗೂ ಇತರರು | | ಶ್ರೀಮತಿ ಲಕ್ಷ್ಮೀಬಾಯಿ ಗಂಡ ಸಿದ್ದಪ್ಪ ಕಪ್ಪಲಗದ್ದಿ ಹಾಗೂ ಇತರರು |

:- ವಿವಾದಾಂಶಗಳು :-

1. ವಾದಿಯರು ವಾದಪತ್ರದಲ್ಲಿನ ಅನುಬಂಧದ ಆ ವಂಶಾವಳಿ ನಿಜವಿರುತ್ತದೆ ಎಂಬುದನ್ನು ವಾದಿಯರು ರುಜುವಾತುಪಡಿಸುವರೇ ?

2. ವಾದಿಯರು ವಾದಪತ್ರದಲ್ಲಿ ಹೇಳಿರುವಂತೆ ವಾದಿಯರು ಮತ್ತು ಪ್ರತಿವಾದಿ 1 ರವರು ಜಂಟಿ ಕುಟುಂಬದ ಸದಸ್ಯರು ಎಂಬುವುದನ್ನು ವಾದಿಯರು ರುಜುವಾತುಪಡಿಸುವರೇ ?

3. ವಾದಿಯರು ವಾದ ಪತ್ರದ ಖಂಡಿಕೆ 6 ರಲ್ಲಿ ಹೇಳಿರುವಂತೆ ಮೌಖಿಕ ಪಾಲು ವಾಟ್ನಿ ಆಗಿರುವುದೆಂಬುದನ್ನು ವಾದಿಯರು ರುಜುವಾತುಪಡಿಸುವರೇ ?

4. ವಾದಿಯರು ವಾದಪತ್ರದಲ್ಲಿ ಹೇಳಿರುವಂತೆ ದಾವಾದ ಅನುಬಂಧ 'ಬಿ' ದ ಆಸ್ತಿಗಳು ವಾದಿಯರ ಮತ್ತು ಪ್ರತಿವಾದಿಯರ ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಎಂಬುವುದನ್ನು ವಾದಿಯರು ರುಜುವಾತುಪಡಿಸುವರೇ ?

5. ವಾದಿಯರು ವಾದ ಪತ್ರದ ಖಂಡಿಕೆ 8 ರಲ್ಲಿ ಹೇಳಿರುವಂತೆ ಪ್ರತಿವಾದಿ 2 ರಿಂದ 4 ರವರು ತಮ್ಮ ಹೇಸರಿನಲ್ಲಿ ಇದ್ದ ಜಮೀನುಗಳನ್ನು ಪ್ರತಿವಾದಿ 5 ರಿಂದ 7 ರವರ ಹೆಸರಿಗ ಖೊಟ್ಟಿ ರೀತಿಯಾದ ಭಕ್ಷಿಸ ಪತ್ರಗಳನ್ನು ತಯಾರಿಸಿ ವರ್ಗಾವಣೆ ಮಾಡಿರುತ್ತಾರೆ ಎಂಬುವುದನ್ನು ವಾದಿಯರು ರುಜುವಾತುಪಡಿಸುವರೇ ?

6. ಪ್ರತಿವಾದಿಯವರು ತಮ್ಮ ಲಿಖಿತ ಪತ್ರದ ಖಂಡಿಕೆ 12 ರಲ್ಲಿ ಹೇಳಿರುವಂತೆ ದಾವಾ ಆಸ್ತಿ ಅನುಕ್ರಮ ನಂಬರ 2 ರಿಂದ 4 ರ ಆಸ್ತಿಗಳು ಪ್ರತಿವಾದಿ 2 ರಿಂದ 4 ರವರ ಸ್ವಯಾರ್ಜಿತ ಆಸ್ತಿ ಗಳು ಎಂಬುವುದನ್ನು ಪ್ರತಿವಾದಿಯವರು ರುಜುವಾತುಪಡಿಸುವರೇ ?

7. ವಾದಿಯರು ಸಿದ್ದಪುರ ಗ್ರಾಮದ ಮನೆಯ ಆಸ್ತಿ ನಂಬರ 283 ಹಾಗೂ 284 ಆಸ್ತಿಗಳನ್ನು ದಾವಾ ಆಸ್ತಿಗಳನ್ನಾಗಿ ಸೇರ್ಪಡೆಮಾಡದೆ ಇರುವುದರಿಂದ ಈ ದಾವೆಯು ಕಾನೂನಿನ ಅಡಿಯಲ್ಲಿ ಊರ್ಜಿತವಾಗಿರುವುದಿಲ್ಲ ವೆಂದು ವಾದಿಯರು ರುಜುವಾತುಪಡಿಸುವರೇ ?

8. ವಾದಿಯರ ದಾವೆಯು ಸಿವಿಲ್ ಪ್ರಕ್ರಿಯ ಸಂಹಿತೆ ಕಲಂ 10 ರಡಿಯಲ್ಲಿ ಪ್ರತಿಷೇಧಿತ ವಾಗಿರುವುದೆ?

9. ವಾದಿಯರು ನ್ಯಾಯಾಲಯಕ್ಕೆ ಸಂದಾಯ ಮಾಡಿರುವ ನ್ಯಾಯಾಲಯದ ಶುಲ್ಕ ಸಮಂಜಸವಾಗಿರುವುದೇ?

10. ವಾದಿಯರು ವಾದ ಪತ್ರದಲ್ಲಿ ಕೋರಿರುವಂತೆ ದಾವಾ ಆಸ್ತಿಗಳಲ್ಲಿ 1/5 ಹಿಸ್ಸೆಯನ್ನು ಪಡೆಯಲು ಅರ್ಹರೇ?

11. ಯಾವ ಆದೇಶ ಅಥವಾ ಡಿಕ್ರಿ?

ದಿನಾಂಕ ಃ **1** ನೇ ಜೂನ್ **2024.**

(ವಿಜಯಕುಮಾರ ಕನ್ನೂರ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಬಾಗಲಕೋಟೆ

.